**<u>ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ</u>**

**<u>ದಿನಾಂಕಃ 06.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರಿದ ಪಾಟೀ ಸವಾಲುಃ 4 ನೇ ಪ್ರತಿ ವಾದಿ ಪರ ಶ್ರೀ . ಹೆಚ್.ಬಿ.ಜಿ. ವಕೀಲರಿಂದಃ</u>**

4. ದಾವಾಸ್ವತ್ತಿನ ಪ್ರಸ್ತುತ ಬೆಲೆ 1 ಗುಂಟೆಗೆ ರೂ.75,000/-ದಿಂದ ರೂ.80,000/- ರೂಗಳ ಮೌಲ್ಯಕ್ಕಿಂತ ಕಡಿಮೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಪ್ರತಿವಾದಪತ್ರದಲ್ಲಿ ಹೇಳಿರುವಂತೆ ನಮ್ಮ ಕುಟುಂಬದಲ್ಲಿ ಪಂಚಾಯಿತಿ ಪಾರಿಕತ್ತಿನಂತೆ ವಿಭಾಗವಾಗಿರುವ ವಿಚಾರ 3 ಮತ್ತು 4 ನೇ ಪ್ರತಿವಾದಿಗಳಿಗೆ ನಾನು ತಿಳಿಸಿರುವುದಿಲ್ಲ ಎಂದರೆ ಸಾಕ್ಷಿ ಸದರಿ ವಿಚಾರವನ್ನು ನನ್ನ ತಂದೆ ಅವರಿಗೆ ತಿಳಿಸಿದ್ದರು ಮತ್ತು ಸದರಿ ವಿಭಾಗ ಎಲ್ಲರ ಸಮ್ಮುಖದಲ್ಲಾಗಿರುತ್ತದೆ ಎನ್ನುತ್ತಾರೆ. ನನ್ನ ಪ್ರತಿವಾದಪತ್ರದಲ್ಲಿ ಹೇಳಿರುವಂತೆ ಸದರಿ ಪಂಚಾಯಿತಿ ಪಾರಿಕತ್ ಗೆ 3 ಮತ್ತು4 ನೇ ಪ್ರತಿವಾದಿಗಳು ಸಹಿಗಳನ್ನು ಹಾಕಿರುವುದಿಲ್ಲ ಆದರೆ ಸದರಿ ಪಾರಿಕತ್ ಅವರ ಸಮ್ಮುಖದಲ್ಲೇ ಆಗಿರುತ್ತದೆ. ಸದರಿ ಪಾರಿಕತ್ತು 3 ಮತ್ತು 4 ನೇ ಪ್ರತಿವಾದಿಗಳ ಸಮಕ್ಷಮ ಆಗಿದ್ದರೆ ಅವರುಗಳು ಸಹ ಅದಕ್ಕೆ ಸಹಿ ಮಾಡುತ್ತಿದ್ದರು ಎಂದರೆ ಸಾಕ್ಷಿ ಅವರ ಸಹಿಗಳನ್ನು ಪಡೆಯುತ್ತೇನೆ ಎಂದು ನನ್ನ ತಂದೆ ತಿಳಿಸಿದ್ದು ನಂತರ ಕುಟುಂಬದಲ್ಲಿ ವ್ಯಾಜ್ಯ ಶುರುವಾದ ಕಾರಣ ಅವರುಗಳ ಸಹಿಗಳನ್ನು ನನ್ನ ತಂದೆ ಪಡೆದಿರುವುದಿಲ್ಲ ಎನ್ನುತ್ತಾರೆ. ಸದರಿ ಪಾರಿಕತ್ ನ ಸಮಯದಲ್ಲಿ ನನ್ನ ಮುಂದೆ ಯಾವುದೇ ಗಲಾಟೆ ನಡೆದಿರುವುದಿಲ್ಲ. ಸದರಿ ಪಂಚಾಯಿತಿ ಪಾರಿಕತ್ ಅನ್ನು ನಾನು ಮತ್ತು 1 ನೇಪ್ರತಿವಾದಿ ಮಾತ್ರ ಸೃಷ್ಟಿಸಿದ್ದು ವಾದಿ ಮತ್ತು 3 ಮತ್ತು 4 ನೇ ಪ್ರತಿವಾದಿಗಳಿಗೆ ತಿಳಿಸದೇ ಮತ್ತು ಅವರ ಹಾಜರಾತಿ ಇಲ್ಲದೇ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಪಾರಿಕತ್ ನ ವಿಚಾರವನ್ನು ವಾದಿ 3 ಮತ್ತು 4 ನೇ ಪ್ರತಿವಾದಿಗಳಿಗೆ ನಾವು ತಿಳಿಸಿರುತ್ತೇವೆ ಎಂದು ತೋರಿಸಲು ಯಾವುದಾದರೂ ದಾಖಲಾತಿಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಅವರಿಗೆ ಬಾಯಿ ಮಾತಿನಲ್ಲಿ ತಿಳಿಸಿದ್ದು ಅದಕ್ಕೆ ಸಂಬಂದಿಸಿದ ಯಾವುದೇ ದಾಖಲಾತಿಗಳು ಇರುವುದಿಲ್ಲ ಎನ್ನುತ್ತಾರೆ. ಪಾರಿಕತ್ ನ ಬಗ್ಗೆ ಮಾಹಿತಿಯನ್ನು ವಾದಿ, 3 ಮತ್ತು 4 ನೇ ಪ್ರತಿವಾದಿಗಳಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

5. 3 ಮತ್ತು 4 ನೇ ಪ್ರತಿವಾದಿಗಳಿಗೆ ದಾವಾಸ್ವತ್ತಿನ ಮೇಲಿರುವ ಹಕ್ಕನ್ನು ಚ್ಯುತಿಗೊಳಿಸಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ-ಹನುಮಂತಪ್ಪ ಮತ್ತು ಅವರ ಅಣ್ಣತಮ್ಮಂದಿರು, ಪಶ್ಚಿಮಕ್ಕೆ-ಲಕ್ಷ್ಮಣಪ್ಪ, ರಾಜಣ್ಣ, ಕೆಂಪಯ್ಯ, ಉತ್ತರಕ್ಕೆ-ಎಲ್ಲಪ್ಪ, ರಾಜಣ್ಣ, ಮೂರ್ತಪ್ಪ.ದಕ್ಷಿಣಕ್ಕೆ- ಸತ್ತಿಗಪ್ಪ ಮತ್ತು ಕುಂಬಿ ರಾಮಯ್ಯರವರ ಜಮೀನುಗಳು ಇರುತ್ತವೆ.

6. 1 ನೇ ಪ್ರತಿವಾದಿಯ ಕುಟುಂಬದ ಸದಸ್ಯರು ವಾದಿ ಮತ್ತು 2 ರಿಂದ 4 ನೇ ಪ್ರತಿವಾದಿಗಳು ಎಂದರೆ ಸರಿ . ದಾವಾಸ್ವತ್ತು ಈಗ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ . ನಿ.ಪಿ.2 ರಲ್ಲಿ ದಾವಾಸ್ವತ್ತು 1 ನೇ ಪ್ರತಿವಾದಿಯ ಹೆಸರಿಗೆ ಹಕ್ಕು ನಿವೃತ್ತಿ ಪತ್ರದ ಮುಖಾಂತರ ಬಂದಿರುತ್ತದೆ ಎಂದು ಕಾಲಂ ನಂ:10 ರಲ್ಲಿ ನಮೂದಿಸಲಾಗಿರುತ್ತದೆ ಎಂದರೆ ಸರಿ. ನಿ.ಪಿ.4 ಪಹಣಿ ಪತ್ರಿಕೆಯಲ್ಲೂ 1 ನೇ ಪ್ರತಿವಾದಿಯ ಹೆಸರು ನಮೂದಾಗಿರುತ್ತದೆ ಎಂದರೆ ಸರಿ . ದಾವಾಸ್ವತ್ತಿನ ಪ್ರಸ್ತುತ ಪಹಣಯೂ ಸಹ 1 ನೇ ಪ್ರತಿವಾದಿಯಹೆಸರಿನಲ್ಲಿ ಇರುತ್ತದೆ ಎಂದರೆ ಸರಿ . ನಿ.ಪಿ.3 ವಂಶವೃಕ್ಷ ಸರಿಯಾಗಿರುತ್ತದೆ ಎಂದರೆ ಸರಿ .

7. ದಾವಾಸ್ವತ್ತು ಮೂಲತಃ 1 ನೇ ಪ್ರತಿವಾದಿಯ ತಂದೆಗೆ ಸೇರಿದ ಆಸ್ತಿ ಎಂದರೆ ಸರಿ . ನಿ.ಡಿ.1 ರಲ್ಲಿ ಸದರಿ ದಿನಾಂಕದಂದು 3 ಮತ್ತು 4 ನೇ ಪ್ರತಿವಾದಿಗಳು ಹಾಜರಿದ್ದರು ಮತ್ತು ಅವರು ತಮಗೆ ದಾವಾಸ್ವತ್ತಿನಲ್ಲಿ ಯಾವುದೇ ಪಾಲು ಬೇಡ ಎಂದು ತಿಳಿಸಿರುವ ಬಗ್ಗೆ ನಮೂದಿಸಿರುವುದಿಲ್ಲ ಎಂದರೆ ಸರಿ . ನಿ.ಡಿ.1 ರ ಮೇಲೆ ಯಾವುದೇ ಕಂದಾಯ ದಾಖಲಾತಿಗಳು ವರ್ಗಾವಣೆ ಆಗಿರುವುದಿಲ್ಲ ಎಂದರೆ ಸರಿ . ನಿ.ಡಿ.1 ಅನ್ನು ಸೃಷ್ಟಿಸಿದ್ದು ಅದಕ್ಕೆ ಒಟ್ಟು ಕುಟುಂಬದ ಎಲ್ಲಾ ಸದಸ್ಯರ ಸಹಿಗಳನ್ನು ಪಡೆಯದೇ ಇರುವುದರಿಂದ ಅದರ ಮೇರೆಗೆ ಕಂದಾಯ ದಾಖಲಾತಿಗಳು ವರ್ಗಾವಣೆ ಆಗಿರುವುದಿಲ್ಲ ಎಂದರೆ ಸಾಕ್ಷಿ ಕಂದಾಯ ದಾಖಲಾತಿಗಳನ್ನು ವರ್ಗಾವಣೆ ಮಾಡಿಕೊಳ್ಳಬೇಕೆಂದು ನಮಗೆ ತಿಳಿದಿರುವುದಿಲ್ಲ ಎನ್ನುತ್ತಾರೆ. ದಾವಾಸ್ವತ್ತಿನ ಮೇಲೆ 3 ಮತ್ತು 4 ನೇ ಪ್ರತಿವಾದಿಗಳಿಗಿರುವ ಹಕ್ಕನ್ನು ಚ್ಯುತಿಗೊಳಿಸಲು ನಿ.ಡಿ.1 ಅನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

8. ಪ್ರಸ್ತುತ ದಾವೆಯನ್ನು ಸಲ್ಲಿಸುವಾಗ ದಾವಾಸ್ವತ್ತಿನ ಮೌಲ್ಯ ರೂ.12,00,000/- ಗಳ ಒಳಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ,ವಾದಿ , ಮತ್ತು ಇತರೆ ಪ್ರತಿವಾದಿಗಳು ಇಂದಿಗೂ ಸಹ ಒಟ್ಟು ಕುಟುಂಬದ ಸದಸ್ಯರಾಗಿರುತ್ತೇವೆ ಎಂದರೆ ಸರಿಯಲ್ಲ. ಇದನ್ನು ತೋರಿಸಲು ನಾನು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. 3 ಮತ್ತು 4 ನೇ ಪ್ರತಿವಾದಿಗಳು ಸಹ ದಾವಾಸ್ವತ್ತಿನಲ್ಲಿ ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಮತ್ತು ವಾದಿ ಬೇರೆ ವಾಸವಿರುತ್ತೇವೆ. 3 ಮತ್ತು 4 ನೇ ಪ್ರತಿವಾದಿಗಳಿಗೆ ದಾವಾಸ್ವತ್ತಿನ ಮೇಲಿರುವ ಹಕ್ಕನ್ನು ಚ್ಯುತಿಗೊಳಿಸಲು ನಾನು ಮತ್ತು ವಾದಿ ಶರೀಕಾಗಿ ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಪ್ರತಿವಾದಪತ್ರದಲ್ಲಿ ಬರೆದಿರುವ ವಿಚಾರಗಳೆಲ್ಲವೂ ಸುಳ್ಳು ಎಂದರೆ ಸರಿಯಲ್ಲ. ನನ್ನ ಮುಖ್ಯವಿಚಾರಣೆಯ ಪ್ರಮಾಣಪತ್ರದಲ್ಲಿ ಮತ್ತು ಪ್ರತಿವಾದ ಪತ್ರದಲ್ಲಿ ಬರೆದಿರುವ ವಿಚಾರಗಳೆಲ್ಲವೂ ಸುಳ್ಳು ಎಂದರೆ ಸರಿಯಲ್ಲ.ನಿ.ಡಿ.1 ಅನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

**( ವಾದಿ ಪರ ವಕೀಲರು ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ , ಗುಬ್ಬಿ.**